ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: 18 ಲೆ / ಸಾ
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE 18/3/21

## 15 ಸಚಿವರಿದ್ದರೂ ಬೆಳಗಾವಿ ಸೌಧ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ

# ಸೌಧ ಬಳಕೆಗೆ ಉಕ ಸಚಿವರಿಗೇ ನಿರಾಸಕ್ತಿ




ಪ್ರಮೋದ ಹರಿಕಾಂತ ಬೆಳಗಾವಿ
pramod.harikant@timesgroup.com

ಮುಖ್ಯಮಂತ್ರಿ ಹೊರತುಪಡಿಸಿ ಉಳಿದೆಲ್ಲ ಪ್ರಮುಖ ಹುದ್ದೆಗಳು ಉತ್ತರ ಕರ್ನಾಟಕದವರ ಬಳಿಯೇ ಇದ್ದರೂ ಸುವರ್ಣ ವಿಧಾನಸೌಧವನ್ನು ಕೇಳುವವರೇ ಇಲ್ಲ, ರಾಜ್ಯ ಮಟ್ಟದ ಕಚೇರಿ ಬರುವುದಿರಲಿ, ಈ ಭಾಗದ ಸಚಿವರೇ ಸೌಧದತ್ತ ಸುಳಿಯುತ್ತಿಲ್ಲ.

ಉತ್ತರ ಕರ್ನಾಟಕದಲ್ಲಿ ಇಬ್ಬರು ಉಪಮುಖ್ಯಮಂತ್ರಿ ಸೇರಿ 15 ಸಚಿವರಿದ್ದಾರೆ. ವಿಧಾನ ಸಭೆ (ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ) ಮತ್ತು ಪರಿಷತ್‌ನ (ಎಸ್.ಆರ್. ಪಾಟೀಲ್) ವಿರೋಧ ಪಕ್ಷದ ನಾಯಕರಿದ್ದಾರೆ.

ವಿಧಾನಸಭಾಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ ಹುದ್ದೆ ಕೂಡ ಈ ಭಾಗದವರ ಬಳಿಯೇ ಇದೆ. ಇಷ್ಟೆಲ್ಲ 'ಪವರ್' ಇದ್ದರೂ ಉತ್ತರ ಕರ್ನಾಟಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಕ್ಕಾಗಿ 450 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸುವರ್ಣ ವಿಧಾನಸೌಧ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲವಾಗಿದೆ.

ಗಡಿ ಜಿಲ್ಲೆ ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣವಾಗಿ 9 ವರ್ಷಗಳೇ ಉರುಳಿ ಹೋಗಿವೆ. ಎರಡು ವರ್ಷಗಳಿಂದ ಅಧಿವೇಶನವೇ ನಡೆದಿಲ್ಲ. ಪ್ರತಿ ತಿಂಗಳು ಸೌಧ ನಿರ್ವಹಣೆಗೆ 50-60 ಲಕ್ಷ ರೂ. ಖರ್ಚಾಗುತ್ತಿದೆ. ಅಧಿಕಾರಕ್ಕೆ ಬಂದ ತಕ್ಷಣ ರಾಜ್ಯ ಮಟ್ಟದ 22 ಕಚೇರಿಗಳನ್ನು ಉತ್ತರಕ್ಕೆ ಸ್ಥಳಾಂತರಿಸುತ್ತೇವೆ ಎಂದಿದ್ದ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ವರ್ಷವೇ ಕಳೆದುಹೋಗಿದೆ.

[illegible]

ಸುವರ್ಣ ವಿಧಾನಸೌಧದಲ್ಲಿ ಪ್ರತಿ ಸಚಿವರ ಕಚೇರಿಗೆ ಒಂದರಿಂದ ಎರಡು ಕೊಠಡಿ ಕಾಯ್ದಿರಿಸಲಾಗಿದೆ. ಕಚೇರಿ ಬಾಗಿಲಿಗೆ ನಾಮ ಫಲಕ ಅಳವಡಿಸಲು ಪಟ್ಟಿಯನ್ನೂ ಇಡಲಾಗಿದೆ. ಒಮ್ಮೆಯೂ ಅಲ್ಲಿ ನೂತನ ಸಚಿವರ ಹೆಸರು ಕಾಣಲಿಲ್ಲ. ಅಧಿವೇಶನ ನಡೆಸುವುದಕ್ಕಿಂತ ಸಚಿವರು ಸರದಿ ಪ್ರಕಾರ ಸುವರ್ಣ ಸೌಧದಲ್ಲಿ ತಿಂಗಳಿಗೆ ಒಮ್ಮೆಯಾದರೂ ಜನಸಂಪರ್ಕ ಸಭೆ ನಡೆಸಿದರೆ ಉತ್ತಮ ಎನ್ನುವ ಅಭಿಪ್ರಾಯವೂ ಇದೆ.

ಅವರ ಕಚೇರಿಗಳು ಮಾತ್ರ ಇದ್ದಲ್ಲೇ ಇವೆ.

**ಸರಿಯಾಗಿ ಬಳಸಿಲ್ಲ:** ಒಂದಿಬ್ಬರು ಸಚಿವರು ಅಧಿಕಾರಿಗಳ ಸಭೆ ನಡೆಸಿದ್ದು ಬಿಟ್ಟರೆ, ಯಾವೊಬ್ಬ ಸಚಿವರು ಬೆಳಗಾವಿ ಸುವರ್ಣ ಸೌಧದ ಮೂಲಕ ಈ ಭಾಗದ ಜನರ ನೋವು ಆಲಿಸುವ ಕೆಲಸ ಮಾಡಿಯೇ ಇಲ್ಲ. ಸ್ವತಃ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಗೋವಿಂದ ಕಾರಜೋಳ ಅವರು ಕೂಡ ಸುವರ್ಣ ವಿಧಾನ ಸೌಧದಲ್ಲಿ ಒಮ್ಮೆಯೂ ಜನಸಂಪರ್ಕ ಅಥವಾ ಇಲಾಖೆ ಸಭೆ ನಡೆಸಿಲ್ಲ. ಈ ಹಿಂದೆ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಬೆಳಗಾವಿ ಪ್ರವಾಸಿ ಮಂದಿರದಲ್ಲಿ ಆತುರದಲ್ಲಿ ಜನಸಂಪರ್ಕ ಸಭೆ ನಡೆಸಿ ಹೋಗಿದ್ದರು. ಎಚ್.ಡಿ. ಕುಮಾರಸ್ವಾಮಿ ಅವರು ಮಾತ್ರ ಸಿಎಂ ಆಗಿದ್ದಾಗ ಸುವರ್ಣ ವಿಧಾನಸೌಧದಲ್ಲಿ ಜನಸಂಪರ್ಕ ಸಭೆ ನಡೆಸಿದ್ದರು.

### ಉತ್ತರ ಕರ್ನಾಟಕದ ಸಚಿವರು

**ಬೆಳಗಾವಿ**
- ಲಕ್ಷ್ಮಣ ಸವದಿ: ಸಾರಿಗೆ ಇಲಾಖೆ, ಉಪಮುಖ್ಯಮಂತ್ರಿ
- ಉಮೇಶ ಕತ್ತಿ: ಆಹಾರ ಇಲಾಖೆ
- ಶ್ರೀಮಂತ ಪಾಟೀಲ್: ಜವಳಿ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಖಾತೆ
- ಶಶಿಕಲಾ ಜೊಲ್ಲೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಹುಬ್ಬಳ್ಳಿ-ಧಾರವಾಡ**
- ಜಗದೀಶ ಶೆಟ್ಟರ್: ಮಾಜಿ ಸಿಎಂ, ಬೃಹತ್ ಉದ್ಯಮ ಇಲಾಖೆ

**ಹಾವೇರಿ**
- ಬಸವರಾಜ ಬೊಮ್ಮಾಯಿ: ಗೃಹ, ಸಂಸದೀಯ ವ್ಯವಹಾರಗಳ ಸಚಿವ
- ಬಿ.ಸಿ. ಪಾಟೀಲ್: ಕೃಷಿ ಇಲಾಖೆ
- ಆರ್. ಶಂಕರ್: ತೋಟಗಾರಿಕೆ ಇಲಾಖೆ

**ಬಾಗಲಕೋಟೆ**
- ಗೋವಿಂದ ಕಾರಜೋಳ: ಉಪಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ
- ಮುರುಗೇಶ್ ನಿರಾಣಿ: ಗಣಿ ಮತ್ತು ಭೂ ವಿಜ್ಞಾನ ಇಲಾಖೆ

**ಗದಗ**
- ಸಿ.ಸಿ. ಪಾಟೀಲ್: ಸಣ್ಣ ಕೈಗಾರಿಕೆ ಇಲಾಖೆ

**ಬಳ್ಳಾರಿ**
- ಬಿ. ಶ್ರೀರಾಮುಲು: ಸಮಾಜ ಕಲ್ಯಾಣ ಇಲಾಖೆ

**ವಿಜಯನಗರ**
- ಆನಂದ ಸಿಂಗ್: ಪ್ರವಾಸೋದ್ಯಮ ಇಲಾಖೆ

**ಬೀದರ್**
- ಪ್ರಭು ಚವ್ಹಾಣ: ಪಶುಸಂಗೋಪನೆ ಇಲಾಖೆ

**ಉತ್ತರ ಕನ್ನಡ**
- ಶಿವರಾಮ ಹೆಬ್ಬಾರ: ಕಾರ್ಮಿಕ ಮತ್ತು ಸಕ್ಕರೆ ಇಲಾಖೆ

**ಪ್ರಮುಖ ಹುದ್ದೆಯಲ್ಲಿರುವವರು**
- ಬಾದಾಮಿ ಕ್ಷೇತ್ರ: ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ, ಮಾಜಿ ಸಿಎಂ.
- ಬಾಗಲಕೋಟೆ: ಎಸ್.ಆರ್. ಪಾಟೀಲ್, ವಿಧಾನ ಪರಿಷತ್ ವಿಪಕ್ಷ ನಾಯಕ
- ಶಿರಸಿ ಕ್ಷೇತ್ರ: ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭಾಧ್ಯಕ್ಷ.
- ಸವದತ್ತಿ ಕ್ಷೇತ್ರ: ಆನಂದ ಮಾಮನಿ, ವಿಧಾನಸಭೆ ಉಪಾಧ್ಯಕ್ಷ.
- ಶಿಕ್ಷಕರ ಮತ ಕ್ಷೇತ್ರ: ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ.